ಕೆಲೆಬಾಗ್ ನಕಾಕ್ STD
23/12/22

# ಕರ್ನಾಟಕವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 638 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ .ಪಿ ನಂಜುಂಡಿ ವಿಶ್ವಕರ್ಮ(ವಿಧಾನ ಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 23.12.2022 |
| ಉತ್ತರಿಸುವ ಸಚಿವರು | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ಈವರೆಗೂ ಬಹಿರಂಗಗೊಳಿಸದಿರಲು ಕಾರಣಗಳೇನು; | ಶ್ರೀ ಹೆಚ್. ಕಾಂತರಾಜರವರ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015 ವರದಿಯನ್ನು ಸಿದ್ಧಪಡಿಸಿದ್ದು, ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. |
| ಆ) | ಕಳೆದ ಅಧಿವೇಶನಗಳಲ್ಲಿ ಆಯೋಗದ ಅಧ್ಯಕ್ಷರ ನೇಮಕವಾದ ಕೂಡಲೇ ವರದಿ ಬಹಿರಂಗ ಪಡಿಸುವುದಾಗಿ ಸರ್ಕಾರ ಭರವಸೆ ನೀಡಿದ್ದರೂ, ಈವರೆಗೂ ವರದಿ ಬಹಿರಂಗಗೊಳಿಸದಿರಲು ಕಾರಣಗಳೇನು; | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ 1995 ರ ಕಲಂ 8 (3) ರಲ್ಲಿ ಈ ಕೆಳಕಂಡಂತೆ ಉದ್ಧರಿಸಲಾಗಿದೆ.<br><br>**"ಆಯೋಗದ ಎಲ್ಲಾ ಆದೇಶಗಳು ಮತ್ತು ತೀರ್ಮಾನಗಳನ್ನು ಸದಸ್ಯ-ಕಾರ್ಯದರ್ಶಿ ಅಥವಾ ಈ ಪರವಾಗಿ ಸದಸ್ಯ-ಕಾರ್ಯದರ್ಶಿಯು ಸೂಕ್ತವಾಗಿ ಪ್ರಾಧಿಕರಿಸಿದ ಆಯೋಗದ ಇತರ ಯಾರೇ ಅಧಿಕಾರಿಯು ಅಧಿಕೃತಗೊಳಿಸತಕ್ಕದ್ದು."**<br><br>ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015ರ ವರದಿಯಲ್ಲಿ ಅಂದಿನ ಸದಸ್ಯ ಕಾರ್ಯದರ್ಶಿಯವರ ಸಹಿ ಇಲ್ಲದಿರುವ ಕುರಿತು ಪ್ರಸ್ತುತ ಜಾರಿಯಲ್ಲಿರುವ ಆಯೋಗವು ಸರ್ಕಾರದ ನಿರ್ದೇಶನವನ್ನು ಕೋರಿದ್ದು, ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

| | | |
|---|---|---|
| ಇ) | ರಾಜ್ಯದ ಏಳುಕೋಟಿ ಜನ ಸಂಖ್ಯೆಯಲ್ಲಿನ ಜಾತಿಗಳ ಸಂಖ್ಯೆಯನ್ನು ಬಹಿರಂಗಗೊಳಿಸುವುದರಿಂದ ತೊಂದರೆಗಳಾಗಬಹುದೆನ್ನುವ ಕಾರಣಕ್ಕೆ ಸರ್ಕಾರ ಬಹಿರಂಗಗೊಳಿಸಲು ಹಿಂಜರಿಯುತ್ತಿರುವುದೇ; ಈ ಕುರಿತು ಸರ್ಕಾರದ ಸ್ಪಷ್ಟನೆ ಏನು; | ಪ್ರ. ಸಂ: (ಆ)ರಲ್ಲಿ ವಿವರಿಸಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ) | ಜಾತಿ ಜನಗಣತಿ ಬಹಿರಂಗಗೊಳಿಸಿದರೆ ಹಿಂದುಳಿದ ವರ್ಗಗಳ ಜನಸಂಖ್ಯೆ ತಿಳಿದ ನಂತರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪಡೆಯಲು ಸಮಾಜಗಳು ಸರ್ಕಾರದ ಮೇಲೆ ಒತ್ತಡ ತರುತ್ತವೆಂಬ ಆತಂಕಗಳೇನಾದರು ಇದೆಯೇ? | |

**ಸಂಖ್ಯೆ: ಹಿಂವಕ 249 ಬಿಸಿಎ 2022**

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು